ಕಬ್ಬು ಅರೆಯಬೇಕಾಗಿರುತ್ತದೆ. ಮಹಾರಾಷ್ಟ್ರ ರಾಜ್ಯಕ್ಕೆ ಹೋಗುತ್ತಿರುವ ಕಬ್ಬು ಇದೇ ರೀತಿ ಮುಂದುವರೆದಲ್ಲಿ ಕಾರ್ಖಾನೆಗೆ ಫೆಬ್ರವರಿ ತಿಂಗಳ ನಂತರ ಕಬ್ಬಿನ ಕೊರತೆ ಉಂಟಾಗಬಹುದು. ಒಂದು ವೇಳೆ ಹೀಗೆ ಕೊರತೆ ಉಂಟಾದಲ್ಲಿ ಪೂರ್ಣ ಸಾಮರ್ಥ್ಯ ಬಳಕೆಯಾಗದ ಕಾರಣವೂ ಸಹ ನಷ್ಟ ಉಂಟು ಮಾಡುವುದು. ಆದ್ದುದರಿಂದ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ ಅಗತ್ಯ ಕಬ್ಬು ಪೂರೈಕೆಯಾಗಬೇಕೆಂಬ ದೃಷ್ಟಿಯಿಂದ ಹೊರಗಡೆ ಹೋಗುವ ಕಬ್ಬನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ಸಹಕಾರ ಇಲಾಖೆ ಅಧ್ಯಕ್ಷರ ವಾರ್ಷಿಕ ಅವಧಿ ವಿಚಾರ.

850 - ಶ್ರೀ ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಸಹಕಾರ ಇಲಾಖೆಯ ಕಾಯಿದೆಯ ಪ್ರಕಾರ ವಾರ್ಷಿಕ ಆಡಳಿತ ಮಂಡಳಿಯ ಅಧ್ಯಕ್ಷರ ಅವಧಿಯು ಯಾವಾಗ ಮುಕ್ತಾಯವಾಗುವುದು?

ಆ) ಹಾಗಿದ್ದಲ್ಲಿ ಜನರಲ್ ಬಾಡಿಯಿಂದ ಮತ್ತೊಂದು ಜನರಲ್ ಬಾಡಿಯವರೆಗೆ ಅವಧಿ ಎಷ್ಟು?

ಇ) ಕೊಪ್ಪ ತಾಲ್ಲೂಕು ಕರೀಮನೆ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರು ಮುಂದುವರಿಯುತ್ತಿರುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ಪ್ರತಿ ವರ್ಷ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿರುತ್ತದೆ.

ಆ) ಒಂದು ಸಹಕಾರಿ ವರ್ಷ

ಇ) ದಿನಾಂಕ 29-12-1992ರಂದು ಕರೀಮನೆಯ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆದಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ.

866 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದವರು ಸಾಲ ಮಂಜೂರಾದ ಸದಸ್ಯರುಗಳಿಗೆ ರಸಗೊಬ್ಬರಗಳನ್ನು ವಿತರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸಗೊಬ್ಬ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೆ?

ಇ) ಹಾಗಿದ್ದಲ್ಲಿ ಸಂಬಂಧಪಟ್ಟವ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಈ) ರಸಗೊಬ್ಬರಗಳನ್ನು ಸಂಘದ ಸದಸ್ಯರುಗಳಿಗೆ ವಿತರಣೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳ ಪೈಕಿ ಎರಡು ಸಹಕಾರ ಸಂಘಗಳಾದ ಒಳಪಟ್ಟಿ ಮತ್ತು ಅಂದೋಲಾ ಇವುಗಳು

ರೈತರಿಗೆ ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡಿಲ್ಲವೆಂಬುದಾಗಿ ದೂರುಗಳು ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡ ಎರಡು ಸಹಕಾರ ಸಂಘಗಳ ಪೈಕಿ ಒಂದು ಸಂಘದ ಪ್ರಕರಣದಲ್ಲಿ ವಿಚಾರಣೆ ನಡೆದಿದ್ದು, ವಿವರವಾದ ವಿಚಾರಣೆ ನಡೆದಿಲ್ಲ. ವಿವರವಾದ ವಿಚಾರಣೆ ನಡೆಸಿ ವರದಿ ತರಿಸಿಕೊಳ್ಳಲಾಗುವುದು. ಇನ್ನೊಂದು ಸಂಘದ ಬಗ್ಗೆ ದೂರು ಇತ್ತೀಚೆಗೆ ಬಂದಿದ್ದು ವಿಚಾರಣೆ ಆಗಬೇಕಾಗಿದೆ.

ಇ) ವಿಚಾರಣಾ ಹಂತದಲ್ಲಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ.

ಈ) ಕೈಗೊಂಡಿದೆ.

ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತ.

981 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತವೆಷ್ಟು?

ಆ) ಸರ್ಕಾರವು ಈ ಮೊತ್ತವನ್ನು ಪೂರ್ಣವಾಗಿ ಬಿಡುಗಡೆ ಮಾಡಿದೆಯೆ?

ಇ) ಇಲ್ಲದಿದ್ದರೆ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು ಮತ್ತು ಎಂದು ಸಂಪೂರ್ಣವಾಗಿ ಪಾವತಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 27.74 ಕೋಟಿ.

ಆ) ಇಲ್ಲ.

ಇ) ಸರ್ಕಾರ ಇನ್ನೂ ರೂ. 10.00 ಗಳನ್ನು ಈ ಬಾಬಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಮೊತ್ತವನ್ನು ಸರ್ಕಾರ ಸದ್ಯದಲ್ಲಿಯೇ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನೆರೆ ಹಾವಳಿಗೀಡಾದ ಪ್ರದೇಶಗಳಲ್ಲಿ ಸಾಲ ವಸೂಲಾತಿಗೆ ಕ್ರಮ.

950 - ಶ್ರೀ ಕೆ. ಹರ್ಷಕುಮಾರ ಗೌಡ, (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನೆರೆ ಹಾವಳಿಗೀಡಾದ ಪ್ರದೇಶದಲ್ಲಿ ಸಾಲ ವಸೂಲಿ ಮಾಡುವ ನಿಟ್ಟಿನಲ್ಲಿ ಸರ್ಕಾರವು ಅನುಸರಿಸುತ್ತಿರುವ ಕ್ರಮವೇನು?

ಆ) ನೆರೆ ಹಾವಳಿಯಿಂದ ಸಾಲ ಪಡೆದ ರೈತರು ನಷ್ಟಕ್ಕೊಳಗಾಗಿರುವುದರಿಂದ ಸರ್ಕಾರದವರು ಅಂತಹವರಿಗೆ ನೀಡುವ ರಿಯಾಯಿತಿಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಅಂತಹ ಪ್ರದೇಶದಲ್ಲಿನ ರೈತರ ಸಹಕಾರ ಸಂಘಗಳಿಂದ ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ಭಾರತೀಯ ರಿಜರ್ವ್ ಬ್ಯಾಂಕು ವಿಧಿಸಿರುವ ಷರತ್ತುಗಳನ್ವಯಿಸಿ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.